# ಶಾಲೆಗಳಲ್ಲಿ ಮಧ್ಯಾಹ್ನದ ಊಟದ ರಾಷ್ಟ್ರೀಯ ಕಾರ್ಯಕ್ರಮ

**ಅಂಶು ವೈಶ್**



ರಾಷ್ಟ್ರೀಯ ಆಹಾರ ಭದ್ರತಾ ಕಾಯಿದೆ, 2013, ಹದಿನಾಲ್ಕು ವರ್ಷ ವಯಸ್ಸಿನವರೆಗಿನ ಪ್ರತಿ ಶಾಲಾ ಮಗುವಿಗೆ ಸರ್ಕಾರ ಅಥವಾ ಸ್ಥಳೀಯ ಸಂಸ್ಥೆಗಳು ನಡೆಸುವ ಅಥವಾ ಅನುದಾನ ಒದಗಿಸುವ ಎಲ್ಲಾ ಶಾಲೆಗಳಲ್ಲಿ ಮಧ್ಯಾಹ್ನದ ವೇಳೆ ಉಚಿತ, ಅಡುಗೆ ಮಾಡಿದ ಹಾಗೂ ಬಿಸಿಯಾದ ಊಟವನ್ನು ನೀಡುವುದಕ್ಕಾಗಿ ಕಾನೂನಿನ ಹಕ್ಕನ್ನು ನೀಡುತ್ತದೆ ಹಾಗೂ ಪೂರೈಸಬೇಕಾದ ಪೌಷ್ಟಿಕಾಂಶಗಳ ಮಾನದಂಡ ಎಗಳನ್ನು ನಿಗದಿಪಡಿಸುತ್ತದೆ. ಇದಕ್ಕೂ ಮೊದಲು, 2009ರ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಮಕ್ಕಳ ಹಕ್ಕು ಕಾಯಿದೆಯು, ಮಧ್ಯಾಹ್ನದ ಊಟವನ್ನು ಸಿದ್ಧಪಡಿಸುವುದಕ್ಕಾಗಿ ಪ್ರತಿ ಶಾಲೆಯಲ್ಲಿ ಅಡುಗೆ ಕೋಣೆ ಇರುವುದನ್ನು ಕಡ್ಡಾಯಗೊಳಿಸಿತ್ತು. ಆದರೆ ಶಾಲೆಗಳಲ್ಲಿ ಮಧ್ಯಾಹ್ನದ ಬಿಸಿಯೂಟಕ್ಕೆ ಅಡಿಪಾಯವನ್ನು ಸುಮಾರು ಒಂದು ಶತಕದ ಹಿಂದೆಯೇ ಹಾಕಲಾಗಿತ್ತು ಹಾಗೂ ಮಕ್ಕಳ ಆಹಾರ ಭದ್ರತೆಯಲ್ಲಿ ಪ್ರಮುಖ ಪಾತ್ರ ವಹಿಸುವುದಕ್ಕಾಗಿ ಇದಕ್ಕೆ ಶಾಸನಾತ್ಮಕ ಸ್ಥಾನಮಾನವನ್ನು ನೀಡುವ ಮೊದಲು ಇದು ಅನೇಕ ರೂಪಗಳನ್ನು ಕಂಡಿದೆ.

## ಇತಿಹಾಸ

ಸಾವಿರದ ಒಂಬೈನೂರ ಇಪ್ಪತ್ತೈದರಲ್ಲಿ ಮದ್ರಾಸು ಮಹಾನಗರ ಪಾಲಿಕೆಯು ತನ್ನ ಶಾಲೆಯಲ್ಲಿ ಬಡ ಮಕ್ಕಳಿಗಾಗಿ ಮಧ್ಯಾಹ್ನದ ಊಟವನ್ನು (ಎಂಡಿಎಂ) ನೀಡಲು ಪ್ರಾರಂಭಿಸಿತು. ಇದನ್ನು ನಂತರ ಇಡೀ ತಮಿಳುನಾಡಿಗೆ ವಿಸ್ತರಿಸಲಾಯಿತು. ಗುಜರಾತ್ಮತ್ತು ಕೇರಳ ರಾಜ್ಯಗಳು ನಂತರ ಇದನ್ನು ಅನುಸರಿಸಿದವು. ಸುಮಾರು 1980ರ ನಡುವಿಗೆ ಈ ಮೂರು ರಾಜ್ಯಗಳು ಹಾಗೂ ಪಾಂಡಿಚೇರಿ ಕೇಂದ್ರಾಡಳಿತ ಪ್ರದೇಶವು (ಯುಟಿ) ತಮ್ಮದೇ ಆದ ಸಂಪನ್ಮೂಲ ದೊಂದಿಗೆ ಪ್ರಾಥಮಿಕ ಶಾಲೆಗಳಲ್ಲಿ ಕಲಿಯುತ್ತಿರುವ ಮಕ್ಕಳಿಗಾಗಿ ಮಧ್ಯಾಹ್ನದ ಬಿಸಿಯೂಟ ಕರ್ಯಕ್ರಮವನ್ನು ಸರ್ವತ್ರೀಕರಣ ಗೊಳಿಸಿದ್ದವು. ಸಾವಿರದ ಒಂಬೈನೂರ ತೊಂಬತ್ತರ ಸುಮಾರಿಗೆ ಗಮನಾರ್ಹ ಎಂಡಿಎಂ ಕಾರ್ಯಕ್ರಮಗಳನ್ನು ನಡೆಸುವುದಕ್ಕಾಗಿ ತಮ್ಮದೇ ಆದ ನಿಧಿಯನ್ನು ಬಳಸುವ ರಾಜ್ಯಗಳ ಸಂಖ್ಯೆಯು ಹನ್ನೆರಡಕ್ಕೆ ಏರಿತ್ತು.

ಹಸಿವನ್ನು ನೀಗಿಸಿ ಶಾಲೆಗಳಲ್ಲಿ ದಾಖಲಾತಿ, ಮಕ್ಕಳನ್ನು ಉಳಿಸಿಕೊಳ್ಳುವುದು ಮತ್ತು ಹಾಜರಾತಿಯ ವೃದ್ಧಿಯಲ್ಲಿ ಎಂಡಿಎಂನ ಸಾಮರ್ಥ್ಯವನ್ನು ಭಾರತ ಸರ್ಕಾರವು ಗುರುತಿಸಿತು. 1995ರಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಪೌಷ್ಟಿಕಾಂಶದ ಬೆಂಬಲ ಒದಗಿಸುವುದಕ್ಕಾಗಿ ರಾಷ್ಟ್ರೀಯ ಕಾರ್ಯಕ್ರಮಕ್ಕೆ ಚಾಲನೆ ನೀಡುವ ಮೂಲಕ ಅಖಾಡಕ್ಕೆ ಇಳಿಯಿತು. ಇದನ್ನು ಒಂದು ಅಂತ್ಯವಾಗಿ ಪರಿಕಲ್ಪಿಸದೆ, ಮಕ್ಕಳ ಆರೋಗ್ಯದ ಕುರಿತು ಶಿಕ್ಷಣ ನೀಡುವುದು ಮತ್ತು ಸುಧಾರಣೆ ತರುವುದು, ಅವರ ಅರಿವಿನ ಬೆಳವಣಿಗೆಗೆ ಸಹಾಯ ಮಾಡುವುದು ಮತ್ತು ಸಾಮಾಜಿಕ ಏಕೀಕರಣವನ್ನು ಉತ್ತೇಜಿಸುವುದು ಮುಂತಾದ ಉದ್ದೇಶಗಳೊಂದಿಗೆ ಇದನ್ನು ಜಾರಿಗೊಳಿಸಲಾಯಿತು. ಆರಂಭದಲ್ಲಿ 2408 ಕ್ಷೇತ್ರಗಳಲ್ಲಿ ಜಾರಿಗೆ ಬಂದ ಎನ್.ಎಸ್.ಪಿ.ಇ ಯನ್ನು ಬೇಗನೇ ದೇಶದ ಎಲ್ಲಾ ಕ್ಷೇತ್ರಗಳಿಗೆ ವಿಸ್ತರಿಸಲಾಯಿತು. ಇದು 2002ರಲ್ಲಿ ಶಿಕ್ಷಣ ಖಾತರಿ ಯೋಜನೆಯಡಿಯಲ್ಲಿ ಸ್ಥಾಪಿಸಲಾದ ಪರ್ಯಾಯ ಶಾಲೆಗಳಲ್ಲಿ ಕಲಿಯುತ್ತಿರುವ ಮಕ್ಕಳಿಗೂ ವಿಸ್ತರಣೆಯಾಯಿತು. ಕೇಂದ್ರೀಯ ಪ್ರಾಯೋಜಿತ ಯೋಜನೆಯಾಗಿ ಜಾರಿಗೆ ಬಂದ ಎನ್.ಪಿ.ಎಸ್.ಇ.ಯ ಮುನ್ನೇರ್ಪಾಡನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಂಚಿಕೊಂಡವು. ಅನುದಾನ ಹಂಚಿಕೆಯ ಮಾದರಿಯು ಸಾಕಷ್ಟು ಬದಲಾವಣೆಗಳನ್ನು ಕಂಡಿದ್ದರೂ ಹಂಚಿಕೆಯ ತತ್ತ್ವವು ಇನ್ನೂ ಮುಂದುವರಿಯುತ್ತಿದೆ.

ಎರಡು ಸಾವಿರದ ಏಳರಲ್ಲಿ ಸುಮಾರು 3500ರಷ್ಟು ಶೈಕ್ಷಣಿಕವಾಗಿ ಹಿಂದುಳಿದ ಕ್ಷೇತ್ರಗಳಲ್ಲಿ ಬಿಸಿಯೂಟವು ಹಿರಿಯ ಪ್ರಾಥಮಿಕ ಶಾಲೆಗಳಿಗೆ ತಲುಪುವ ಮೂಲಕ ಇದರ ವ್ಯಾಪ್ತಿಯಲ್ಲಿ ಸಾಕಷ್ಟು ವಿಸ್ತರಣೆ ಉಂಟಾಯಿತು ಹಾಗೂ ಇದನ್ನು 'ಶಾಲೆಗಳಲ್ಲಿ ಮಧ್ಯಾಹ್ನದ ಬಿಸಿಯೂಟದ ರಾಷ್ಟ್ರೀಯ ಕಾರ್ಯಕ್ರಮ'ವೆಂದು ಮರುನಾಮಕರಣ ಮಾಡಲಾಯಿತು. ಉಳಿದ ಹಿರಿಯ ಪ್ರಾಥಮಿಕ ಶಾಲೆಗಳು ಹೆಚ್ಚು ದಿನ ಕಾಯಬೇಕಾದ ಅನಿವಾರ್ಯತೆ ಉಂಟಾಗಲಿಲ್ಲ. ಏಕೆಂದರೆ ಎಂಡಿಎಂ ಅನ್ನು 2008ರಲ್ಲಿ ಇಡೀ ದೇಶಕ್ಕೆ ವಿಸ್ತರಿಸಲಾಯಿತು. ಇದೇ ವೇಳೆ ಇದನ್ನು ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ ಬೆಂಬಲಿಸಲಾದ ಎಲ್ಲಾ ಮದರಸಗಳು ಮತ್ತು ಮಕ್ತಬ್ಗಳಲ್ಲಿ ಜಾರಿಗೊಳಿಸಲಾಯಿತು. ಎರಡು ಸಾವಿರದ ಒಂಬತ್ತರಲ್ಲಿ ರಾಷ್ಟ್ರೀಯ ಬಾಲಕಾರ್ಮಿಕ ಯೋಜನೆಯ ಶಾಲೆಗಳಲ್ಲಿ ಕಲಿಯುತ್ತಿದ್ದ ಮಕ್ಕಳನ್ನು ಸಹ ಎಂಡಿಎಂ ಅಡಿಯಲ್ಲಿ ಒಳಗೊಳ್ಳಲಾಯಿತು.

ಕಳೆದ ಒಂಬತ್ತು ವರ್ಷಗಳಲ್ಲಿ ಎಂಡಿಎಂನ ವ್ಯಾಪ್ತಿಯಲ್ಲಿ ಯಾವುದೇ ಪರಿಷ್ಕರಣೆ ಉಂಟಾಗಿಲ್ಲ. ಆದರೂ ಕೆಲವು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ತಮ್ಮದೇ ಆದ ಸಂಪನ್ಮೂಲಗಳನ್ನು ಬಳಸಿ ಇದನ್ನು ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ವಿಸ್ತರಿಸಿವೆ ಮತ್ತು/ಅಥವಾ ಶಾಲಾ ದಿನಗಳಲ್ಲಿ ವಾರದ ಎಲ್ಲಾ ಅಥವಾ ಕೆಲ ದಿನಗಳಲ್ಲಿ ಆರೋಗ್ಯದಾಯಕ ತಿನಿಸುಗಳನ್ನು ಸೇರಿಸಿವೆ (ಉದಾಹರಣೆಗೆ ಮೊಟ್ಟೆ, ಬಾಳೆಹಣ್ಣು, ಹಾಲು, ಶೇಂಗಾ ಮತ್ತು ಕಡಲೆ).

## ಎಂಡಿಎಂನ ವಿಕಸನ ಮತ್ತು ಪ್ರಸ್ತುತ ಆಯಾಮಗಳು

ಆಹಾರದ ಹಕ್ಕು ಪ್ರಕರಣ'ದಲ್ಲಿ 2001ರ ನವೆಂಬರ್ ತಿಂಗಳಿನಲ್ಲಿ ನೀಡಲಾದ ಪ್ರಮುಖ ತೀರ್ಪೊಂದರಲ್ಲಿ, ಸರ್ವೋಚ್ಚ ನ್ಯಾಯಾಲಯವು ಎಲ್ಲ ರಾಜ್ಯ ಸರ್ಕಾರಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ನಿರ್ದೇಶನ ನೀಡಿ, ಆರು ತಿಂಗಳುಗಳೊಳಗೆ ಎಲ್ಲಾ ಸರ್ಕಾರಿ ಮತ್ತು ಸರ್ಕಾರಿ ಅನುದಾನಿತ ಪ್ರಾಥಮಿಕ ಶಾಲೆಗಳಲ್ಲಿ ಪ್ರತಿ ಮಗುವಿಗೂ ಅಡುಗೆ ಮಾಡಿದ ಮಧ್ಯಾಹ್ನದ ಬಿಸಿಯೂಟವನ್ನು ನೀಡಬೇಕೆಂದು ತಿಳಿಸಿತು. ಊಟವನ್ನು ಕನಿಷ್ಠ 200 ಶಾಲಾ ದಿನಗಳಲ್ಲಿ

[1] *People's Union for Civil Liberties v. Union of India and Others, CWP 196/2001, popularly known as the 'Right to Food Case'*

ಕನಿಷ್ಠ 300 ಕ್ಯಾಲೊರಿಗಳು ಮತ್ತು 8–12 ಗ್ರಾಂಗಳಷ್ಟು ಪ್ರೋಟೀನ್ನೊಂದಿಗೆ ನೀಡಬೇಕಾಗಿತ್ತು. ಭಾರತ ಸರ್ಕಾರವು ಎಂಡಿಎಂ ಗಾಗಿ ಗುಣಮಟ್ಟದ ಆಹಾರ ಧಾನ್ಯಗಳನ್ನು ಪೂರೈಸುವ ಜವಾಬ್ದಾರಿಯನ್ನು ಹೊಂದಿತ್ತು. ತದನಂತರ 2004ರ ಏಪ್ರಿಲ್ ತಿಂಗಳಿನಲ್ಲಿ ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಇನ್ನೊಂದು ತೀರ್ಪನ್ನು ನೀಡಿ, 2001ರ ತೀರ್ಪನ್ನು 2004ರ ಸೆಪ್ಟೆಂಬರ್‌ಒಳಗೆ ಸಂಪೂರ್ಣವಾಗಿ ಅನುಸರಿಸಬೇಕು ಎಂದು ಹೇಳಲಾಯಿತು. ಅಡುಗೆ ಮಾಡಿ ತಯಾರಿಸಿದ ಊಟವನ್ನು ಮಕ್ಕಳಿಗೆ ಉಚಿತವಾಗಿ ನೀಡಬೇಕು ಎಂಬ ನಿರ್ದೇಶನವನ್ನೂ ನೀಡಲಾಯಿತು. ಶಾಲೆಗಳಲ್ಲಿ ಅಡುಗೆ ಮಾಡುವ ವೆಚ್ಚಕ್ಕಾಗಿ ಮತ್ತು ಅಡುಗೆಮನೆಯ ಶೆಡ್ಗಳನ್ನು ನಿರ್ಮಿಸುವುದಕ್ಕಾಗಿ ಕೇಂದ್ರ ಸರ್ಕಾರವು ಹಣ ಒದಗಿಸಬೇಕು ಮತ್ತು ಅಡುಗೆಯವರು ಹಾಗೂ ಸಹಾಯಕರ ನೇಮಕಾತಿಯಲ್ಲಿ ಪರಿಶಿಷ್ಟ ಜಾತಿಗಳು (ಎಸ್.ಸಿ) ಮತ್ತು ಪರಿಶಿಷ್ಟ ಪಂಗಡಗಳಿಗೆ (ಎಸ್.ಟಿ) ಆದ್ಯತೆ ನೀಡಬೇಕು ಹಾಗೂ ಬರಗಾಲ ಪೀಡಿತ ಪ್ರದೇಶಗಳಲ್ಲಿ ಬೇಸಿಗೆ ರಜೆಯ ಕಾಲದಲ್ಲಿಯೂ ಎಂಡಿಎಂ ಅನ್ನು ಒದಗಿಸಬೇಕು ಎಂದು ನ್ಯಾಯಾಲಯವು ಆದೇಶ ನೀಡಿತು.

ಸರ್ವೋಚ್ಚ ನ್ಯಾಯಾಲಯದ ಆದೇಶಕ್ಕೆ ಅನುಗುಣವಾಗಿ ಅಡುಗೆ ಮಾಡಿದ ಮಧ್ಯಾಹ್ನದ ಬಿಸಿಯೂಟವನ್ನು ನೀಡುವುದಕ್ಕಾಗಿ ಎಂಡಿಎಂ ಕಾರ್ಯಕ್ರಮವನ್ನು 2004ರ ಸೆಪ್ಟೆಂಬರ್‌ತಿಂಗಳಿನಲ್ಲಿ ಗಣನೀಯವಾಗಿ ಪರಿಷ್ಕರಣೆಗೆ ಒಳಪಡಿಸಲಾಯಿತು. ಆಹಾರ ಧಾನ್ಯಗಳ ಉಚಿತ ಪೂರೈಕೆ ಮತ್ತು ಸಾಗಾಣಿಕೆ ಸಬ್ಸಿಡಿಯ ಜೊತೆಗೆ, ಭಾರತ ಸರ್ಕಾರವು ಅಡುಗೆಯ ವೆಚ್ಚದ ಜವಾಬ್ದಾರಿಯನ್ನು ಕೈಗೆತ್ತಿಕೊಂಡಿತು (ಪ್ರತಿ ಶಾಲಾ ದಿನದಂದು ಪ್ರತಿ ಮಗುವಿಗೆ ಒಂದು ರೂಪಾಯಿ). ಪರಿಷ್ಕೃತ ಯೋಜನೆಯು ನಿರ್ವಹಣೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನದ ವೆಚ್ಚಗಳನ್ನು ಒದಗಿಸಿತು ಹಾಗೂ ಬರಗಾಲ ಪೀಡಿತ ಪ್ರದೇಶಗಳಲ್ಲಿ ಬೇಸಿಗೆ ರಜೆಯ ವೇಳೆ ಎಂಡಿಎಂ ಒದಗಿಸುವುದಕ್ಕಾಗಿ ವ್ಯವಸ್ಥೆ ಸಿದ್ಧಪಡಿಸುವುದಕ್ಕಾಗಿ ಪ್ರತ್ಯೇಕ ಏರ್ಪಾಡನ್ನು ಮಾಡಿತು.

ರಾಜ್ಯಗಳು/ ಕೇಂದ್ರಾಡಳಿತ ಪ್ರದೇಶಗಳು, ಪೌಷ್ಟಿಕ ತಜ್ಞರು ಮತ್ತು ಇತರ ಸಂಬಂಧಿತ ವ್ಯಕ್ತಿಗಳೊಂದಿಗೆ ಚರ್ಚಿಸಿದ ನಂತರ 2009ರಲ್ಲಿ ಎಂಡಿಎಂ ಕಾರ್ಯಕ್ರಮಕ್ಕೆ ಇನ್ನೊಮ್ಮೆ ಸಮಗ್ರ ಪರಿಷ್ಕರಣೆ ಮಾಡಲಾಯಿತು. ಸಂತುಲಿತ ಮತ್ತು ಹೊಟ್ಟೆ ತುಂಬುವಷ್ಟು ಊಟವನ್ನು ಖಾತರಿಪಡಿಸುವುದಕ್ಕಾಗಿ ಆಹಾರದ ಮಾನದಂಡಗಳನ್ನು ಸುಧಾರಿಸಲಾಯಿತು ಹಾಗೂ ಅಡುಗೆಯ ವೆಚ್ಚವನ್ನು ಹೆಚ್ಚಿಸಲಾಯಿತು. ಅಲ್ಲದೆ, ಬೆಲೆಗಳ ಹೆಚ್ಚಳದ ಜೊತೆಗೆ ಸಮತೋಲನ ಕಾಪಾಡಿ ಕೊಳ್ಳುವುದಕ್ಕಾಗಿ ಪ್ರತಿ ವರ್ಷವೂ ಅಡುಗೆಯ ವೆಚ್ಚವನ್ನು ಪರಿಷ್ಕರಿಸಲು ನಿರ್ಧರಿಸಲಾಯಿತು. ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ವಿವಿಧ ಅಗತ್ಯತೆಗಳಿಗೆ ಹೆಚ್ಚಿನ ನಮ್ಯತೆ ಮತ್ತು ಸ್ಪಂದಿಸುವಿಕೆಯನ್ನು ತರುವುದಕ್ಕಾಗಿ ಇತರ ಮಾರ್ಪಾಡುಗಳನ್ನು ಸಹ ಮಾಡಲಾಯಿತು. ಉದಾಹರಣೆಗೆ, ಅಡುಗೆ ಕೋಣೆಯ ಶೆಡ್‌ಗಳಿಗಾಗಿ ಇಡೀ ದೇಶಾದ್ಯಂತ ಸಾಮಾನ್ಯ ಯೂನಿಟ್ ವೆಚ್ಚವನ್ನು ನಿಗದಿ ಪಡಿಸುವುದು ಅಪ್ರಾಯೋಗಿಕವಾಗಿತ್ತು. ವೆಚ್ಚದ ಮಂಜೂರಾತಿಯನ್ನು, ದಾಖಲಾತಿಯೊಂದಿಗೆ ಸಮೀಕರಿಸಿದ 'ಪ್ಲಿಂತ್ ಏರಿಯಾ'ವನ್ನು ಆಧರಿಸಿ, ಬೇರೆ ಬೇರೆ ರಾಜ್ಯಗಳಲ್ಲಿ ಚಾಲ್ತಿಯಲ್ಲಿರುವ ನಿರ್ಮಾಣ ವೆಚ್ಚಕ್ಕೆ ಸಂಸ್ಕರಿಸಲಾಯಿತು. ಸಾರ್ವಜನಿಕ ವಿತರಣೆ ವ್ಯವಸ್ಥೆಗೆ (ಪಿಡಿಎಸ್) ಸಮನಾಗಿ, ಸವಾಲಿನಿಂದ ಕೂಡಿದ ವಿವಿಧ ಭೌಗೋಳಿಕ ಪ್ರದೇಶಗಳಿಗೆ ಸಾರಿಗೆ ವೆಚ್ಚಗಳ ಸವಲತ್ತನ್ನು ಸಹ ನೀಡಲಾಯಿತು.

ಎಂಡಿಎಂ ಅನ್ನು ಹಿರಿಯ ಪ್ರಾಥಮಿಕ ಶಾಲೆಗಳಿಗೆ ವಿಸ್ತರಿಸಿದ ನಂತರ ಪ್ರಾಥಮಿಕ ಶಾಲೆ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳ ಮಕ್ಕಳಿಗೆ ಪೌಷ್ಟಿಕಾಂಶದ ವಿವಿಧ ಮಾನದಂಡಗಳು ಮತ್ತು ಅಡುಗೆಯ ವೆಚ್ಚಗಳನ್ನು ನಿಗದಿಪಡಿಸಲಾಗಿದೆ. ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಿಗೆ ಅಡುಗೆಯ ವೆಚ್ಚವನ್ನು ಕ್ರಮವಾಗಿ ಪ್ರತಿ ಶಾಲಾ ದಿನದಂದು ಪ್ರತಿ ಮಗುವಿಗೆ ರೂ 4 ಮತ್ತು ರೂ 6ಕ್ಕೆ ಹೆಚ್ಚಿಸಲಾಗಿದೆ. ಎಂಡಿಎಂ ಅಡಿಯಲ್ಲಿ ಶಾಲಾ ಮಕ್ಕಳ ಪೌಷ್ಟಿಕಾಂಶಗಳ ಅರ್ಹತೆಯನ್ನು ಈ ಕೆಳಗಿನ ಕೋಷ್ಟಕಗಳಲ್ಲಿ ತೋರಿಸಲಾಗಿದೆ:

**ಪೌಷ್ಟಿಕಾಂಶದ ಮಾನದಂಡ**[2]

| ವಸ್ತು | ಪ್ರತಿ ದಿನದಂದು/ ಪ್ರತಿ ಮಗುವಿಗೆ ಪೌಷ್ಟಿಕಾಂಶದ ಮಾನದಂಡ | |
|---|---|---|
| | ಪ್ರಾಥಮಿಕ | ಹಿರಿಯ ಪ್ರಾಥಮಿಕ |
| ಶಕ್ತಿ (Kcal) | 450 | 700 |
| ಪ್ರೋಟೀನ್(ಗ್ರಾಂಗಳಲ್ಲಿ ) | 12 | 20 |

**ಆಹಾರದ ಮಾನದಂಡ**[3]

| ವಸ್ತು | ಪ್ರತಿ ದಿನದಂದು/ ಪ್ರತಿ ಮಗುವಿನ ಪ್ರಮಾಣ (ಗ್ರಾಂಗಳಲ್ಲಿ ) | |
|---|---|---|
| | ಪ್ರಾಥಮಿಕ | ಹಿರಿಯ ಪ್ರಾಥಮಿಕ |
| ಆಹಾರ ಧಾನ್ಯಗಳು | 100 | 150 |
| ಬೇಳೆ ಕಾಳುಗಳು | 20 | 30 |
| ತರಕಾರಿಗಳು (ಸೊಪ್ಪು ತರಕಾರಿಗಳು ಸಹ) | 50 | 75 |
| ಎಣ್ಣೆ ಮತ್ತು ಕೊಬ್ಬು | 5 | 7.5 |
| ಉಪ್ಪು ಮತ್ತು ವ್ಯಂಜನಗಳು | ಅಗತ್ಯಕ್ಕೆ ತಕ್ಕಂತೆ | ಅಗತ್ಯಕ್ಕೆ ತಕ್ಕಂತೆ |

2 ರಾಷ್ಟ್ರೀಯ ಆಹಾರ ಭದ್ರತಾ ಕಾಯಿದೆ, 2013ರ ಅನುಸೂಚಿ IIರಲ್ಲಿ ಸೂಚಿಸಿದಂತೆ

3 ಮೂಲ: ಎಂಡಿಎಂ ವೆಬ್‌ಸೈಟ್ – mdm.nic.in

ವಾಸ್ತವವಾಗಿ ಮೇಲಿನ ಮಾನದಂಡವು ಒಂದು ಊಟವನ್ನು ಸ್ಥಳೀಯ ಆದ್ಯತೆಗಳಿಗೆ ಅನುಗುಣವಾಗಿ ಅಕ್ಕಿ ಅಥವಾ ರೊಟ್ಟಿ (ಅಥವಾ ಇದರ ಯಾವುದಾದರೂ ಒಂದು ರೂಪಾಂತರ)ಯೊಂದಿಗೆ ತರಕಾರಿ ಸಹಿತ ಅಥವಾ ತರಕಾರಿ ಇಲ್ಲದೆಯೇ ಅಡುಗೆ ಮಾಡಿದ ಸಾಂಬಾರ್‌ಅಥವಾ ಬೇಳೆ ಜೊತೆ ತಯಾರು ಮಾಡಿದ ಊಟವೆಂಬುದಾಗಿ ವ್ಯಾಖ್ಯಾನಿಸುತ್ತದೆ. ಕೆಲ ದಿನಗಳಲ್ಲಿ ತರಕಾರಿ ಸಹಿತ ಅಥವಾ ತರಕಾರಿ ಇಲ್ಲದೆಯೇ ಖಿಚಡಿ ಅಥವಾ ದಲಿಯಾ ಅಥವಾ ಸೋಯಾಬೀನ್ ಉತ್ಪನ್ನವನ್ನು ನೀಡಲಾಗುತ್ತದೆ. ಆದರೂ, ಒಳ್ಳೆಯ ಉದ್ದೇಶದ ಆಹಾರ ಮಾನದಂಡದ ಹೊರತಾಗಿಯೂ, ತಾಜಾ ತರಕಾರಿಗಳ (ಮುಖ್ಯವಾಗಿ ಹಸಿರು ಬಣ್ಣದ ಮತ್ತು ಹಸಿರೆಲೆ ತರಕಾರಿಗಳು) ಒಳಗೊಳ್ಳುವಿಕೆಯು ಸವಾಲಾಗಿಯೇ ಉಳಿದಿದೆ.

ಎರಡು ಸಾವಿರದ ಹದಿನೈದರಲ್ಲಿ4 ರೂಪಿಸಲಾದ ಎಂಡಿಎಂ ನಿಯಮಗಳು 2009ರ ಪರಿಷ್ಕೃತ ಯೋಜನೆಗೆ ಕಾನೂನಿನ ರಕ್ಷಣೆಯನ್ನು ನೀಡುತ್ತವೆ ಹಾಗೂ ಇದರ ಮೇಲ್ವಿಚಾರಣೆಯನ್ನು ಬಲಪಡಿಸುವುದಕ್ಕಾಗಿ ಹಾಗೂ ಇದನ್ನು ಯಾವುದೇ ಅಡಚಣೆಯಿಲ್ಲದೆ ಜಾರಿಗೊಳಿಸುವುದನ್ನು ಖಚಿತಪಡಿಸುವುದಕ್ಕಾಗಿ ಅವು ಕೆಲವು ಹೆಜ್ಜೆಗಳನ್ನಿಟ್ಟು ಮುಂದುವರವರಿದಿವೆ. ಎಂಡಿಎಂ ನಿಯಮಗಳ ಪ್ರಕಾರ ಶಾಲಾಡಳಿತ ಸಮಿತಿಗಳು (ಎಸ್.ಎಂ.ಸಿ) ಶಾಲೆಗಳ ಎಂಡಿಎಂ ಕಾರ್ಯನಿರ್ವಹಣೆಯ ನಿಕಟ ಮುನ್ನೆಚ್ಚರಿಕೆ ವಹಿಸಬೇಕು. ಅನುದಾನದ ಕೊರತೆಯಿಂದಾಗಿ ಎಂಡಿಎಂನ ಸ್ಥಗಿತವನ್ನು ತಪ್ಪಿಸುವುದಕ್ಕಾಗಿ ಶಾಲೆಯಲ್ಲಿ ದೊರೆಯುತ್ತಿರುವ ಯಾವುದೇ ನಿಧಿಯನ್ನು ತಾತ್ಕಾಲಿಕವಾಗಿ ಬಳಸಿಕೊಳ್ಳುವ ಅಧಿಕಾರವನ್ನು ಅವು ಶಾಲೆಯ ಮುಖ್ಯೋಪಾಧ್ಯಾಯರಿಗೆ ನೀಡುತ್ತವೆ. ಯಾವುದೇ ಕಾರಣಕ್ಕೆ ಯಾವುದೇ ಶಾಲಾ ದಿನದಂದು ಊಟವನ್ನು ಒದಗಿಸದೆ ಇದ್ದಲ್ಲಿ, ಆಹಾರ ಧಾನ್ಯ ಮತ್ತು ಹಣವನ್ನು ಒಳಗೊಂಡಿರುವ ಆಹಾರ ಭದ್ರತಾ ಭತ್ಯೆಗೆ ಮಕ್ಕಳು ಅರ್ಹರಾಗಿರುತ್ತಾರೆ. ರಾಷ್ಟ್ರೀಯ ಆಹಾರ ಭದ್ರತಾ ಕಾಯಿದೆ ಮತ್ತು ತದನಂತರ ಎಂಡಿಎಂ ನಿಯಮಗಳ ಕಾರಣ ಮಕ್ಕಳ ಆಹಾರ ಹಕ್ಕು ಗಣನೀಯ ಪ್ರಮಾಣದ ವಿಸ್ತರಣೆಯನ್ನು ಕಂಡಿದೆ.

ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವು (ಎಂ.ಎಚ್.ಆರ್.ಡಿ) 2017ರ ಫೆಬ್ರುವರಿ ತಿಂಗಳಿನಲ್ಲಿ ಜಾರಿಗೊಳಿಸಿದ ಒಂದು ಅಧಿಸೂಚನೆಯ5 ಪ್ರಕಾರ, ಎಂಡಿಎಂ ಕರ್ಯಕ್ರಮದ ಸವಲತ್ತನ್ನು ಪಡೆಯಲು ಇಚ್ಛಿಸುವ ಪ್ರತಿಯೊಬ್ಬ ವ್ಯಕ್ತಿಯೂ ಆಧಾರ್‌ಸಂಖ್ಯೆಯನ್ನು ಹೊಂದಿರಬೇಕು. ಇದು ಶಾಲಾ ಮಕ್ಕಳು ಹಾಗೂ ಅಡುಗೆಯವರು ಮತ್ತು ಸಹಾಯಕರಿಗೆ ಅನ್ವಯವಾಗುತ್ತದೆ. ಆಧಾರ್‌ದಾಖಲಾತಿಗೆ ಅರ್ಜಿ ಸಲ್ಲಿಸಲು ಅಂತಿಮ ಗಡುವನ್ನು 2017ರ ಡಿಸೆಂಬರ್‌31ಕ್ಕೆ ನಿಗದಿಪಡಿಸಲಾಯಿತು.

## ಎಂಡಿಎಂ ಏನನ್ನು ಸಾಧಿಸಿದೆ?

ಸುಮಾರು 11 ಲಕ್ಷಕ್ಕೂ ಮಿಕ್ಕಿದ ಶಾಲೆಗಳಲ್ಲಿ ಕಲಿಯುತ್ತಿರುವ ಸುಮಾರು 10 ಕೋಟಿ ಮಕ್ಕಳು ಎಂಡಿಎಂನ ಲಾಭವನ್ನು ಪಡೆಯುತ್ತಿದ್ದಾರೆ, 25 ಲಕ್ಷಕ್ಕೂ ಮಿಕ್ಕಿದ ಅಡುಗೆಯವರು ಮತ್ತು ಸಹಾಯಕರು (80%ಕ್ಕೂ ಹೆಚ್ಚಿನ ಮಹಿಳೆಯರು ಹೆಚ್ಚಾಗಿ ಎಸ್.ಸಿ/ಎಸ್.ಟಿ/ಒ.ಬಿ.ಸಿ ವರ್ಗಗಳಿಗೆ ಸೇರಿದವರು) ಅಡುಗೆ ಮತ್ತು ಆಹಾರ ಒದಗಿಸುವ ಕಾರ್ಯಗಳಲ್ಲಿ ತೊಡಗಿಕೊಂಡಿದ್ದಾರೆ ಹಾಗೂ ಆಹಾರ ಧಾನ್ಯಗಳ ಶೇಖರಣೆ ಮತ್ತು ಅಡುಗೆಯು ಸ್ವಚ್ಛ ಮತ್ತು ಆರೋಗ್ಯಕರ ಪರಿಸರದಲ್ಲಿ ನಡೆಯುವುದನ್ನು ಖಾತರಿಪಡಿಸುವುದಕ್ಕಾಗಿ 8 ಲಕ್ಷಕ್ಕೂ ಮಿಕ್ಕಿದ ಅಡುಗೆ ಕೋಣೆಗಳು ಹಾಗೂ ಉಗ್ರಾಣಗಳನ್ನು ನಿರ್ಮಿಸಲಾಗಿದೆ.[6] ಅಡುಗೆ ಮಾಡಿ ತಯಾರಿಸಿದ ಆಹಾರದ ಬದಲಿಗೆ ಬಿಸ್ಕೆಟಿನಂತಹ 'ರೆಡಿ ಟು ಈಟ್' ಆಹಾರವನ್ನು ನೀಡಲು ಪಟ್ಟಭದ್ರ ಹಿತಾಸಕ್ತಿಗಳು ಆಗಾಗ ನಡೆಸಿದ ಪ್ರಯತ್ನಗಳಿಗೆ ಸರ್ಕಾರ ಹಾಗೂ ನಾಗರಿಕ ಸಮಾಜವು ಪ್ರತಿರೋಧ ಒಡ್ಡಿದೆ. ಮಧ್ಯಾಹ್ನದ ಬಿಸಿಯೂಟ ವ್ಯವಸ್ಥೆಯು ಶಾಲೆಗಳಲ್ಲಿ ಮುಂದುವರಿಯುವುದು ಖಚಿತವೆನಿಸಿದೆ ಹಾಗೂ ಇಂದು ಎಂಡಿಎಂ ಪ್ರಪಂಚದ ಈ ರೀತಿಯ ಅತ್ಯಂತ ದೊಡ್ಡ ಕಾರ್ಯಕ್ರಮವೆನಿಸಿದೆ. ನಿರಂತರತೆ ಮತ್ತು ಪ್ರಮಾಣದ ವಿಚಾರದಲ್ಲಿ, ಭಾರತ ಸರ್ಕಾರದ ಅತ್ಯಂತ ಯಶಸ್ವಿ ಆಹಾರ ಭದ್ರತಾ ಕಾರ್ಯಕ್ರಮಗಳ ಪೈಕಿ ಎಂಡಿಎಂ ಒಂದಾಗಿದೆ ಎಂದು ಪರಿಗಣಿಸಲಾಗಿದೆ.[7]

ಸ್ವತಂತ್ರ ಸಂಸ್ಥೆಗಳು ನಡೆಸಿದ ಮಾದರಿ ಮೌಲ್ಯಮಾಪನ ಅಧ್ಯಯನಗಳು ಮತ್ತು ಕಾರ್ಯಕ್ಷಮತೆ ಪರಿಶೋಧನೆಗಳ ಪ್ರಕಾರ, ಶಾಲೆಗಳಲ್ಲಿ ತಯಾರಿಸಲಾದ ಮಧ್ಯಾಹ್ನದ ಬಿಸಿಯೂಟ ಕಾರ್ಯಕ್ರಮವು ಮುಖ್ಯವಾಗಿ ಹುಡುಗಿಯರು ಮತ್ತು ಪ್ರತಿಕೂಲ ಸ್ಥಿತಿಯಲ್ಲಿರುವ ವಿದ್ಯಾರ್ಥಿಗಳ ವಿಚಾರದಲ್ಲಿ ಅವರ ದಾಖಲಾತಿ, ಶಾಲೆಯಲ್ಲಿ ಉಳಿಸಿಕೊಳ್ಳುವುದು ಮತ್ತು ಹಾಜರಾತಿಯ ವಿಚಾರದಲ್ಲಿ ಧನಾತ್ಮಕ ಪರಿಣಾಮವನ್ನು ಬೀರಿದೆ. ಅವುಗಳ ಪ್ರಕಾರ, ತರಗತಿಯ ಹಸಿವು ನೀಗಿಸುವಲ್ಲಿ ಇದು ಯಶಸ್ವಿಯಾಗಿದೆ ಹಾಗೂ ಮಕ್ಕಳು ಚೆನ್ನಾಗಿ ಕಲಿಯಲು ಸಹಾಯ ಮಾಡುತ್ತದೆ. ಪೌಷ್ಠಿಕಾಂಶಗಳ ಧನಾತ್ಮಕ ಪರಿಣಾಮಗಳು ಮತ್ತು ಪ್ರೋಟೀನ್ಹಾಗೂ ಕಬ್ಬಿಣಾಂಶದ ಕೊರತೆಯಲ್ಲಿನ ಇಳಿಕೆಯನ್ನು ಅಧ್ಯಯನಗಳು ತೋರಿಸಿವೆ. ಎಂಡಿಎಂ, ಸಾಮಾಜಿಕ ಸಮಾನತೆಯನ್ನು ಉತ್ತೇಜಿಸಿದೆ: ವಿವಿಧ ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆಯ ಮಕ್ಕಳು ಊಟ ಮಾಡಲು ಒಟ್ಟಿಗೆ ಕುಳಿತುಕೊಳ್ಳುತ್ತಾರೆ. 'ಮೇಲ್ಜಾತಿಯ ಮಕ್ಕಳಿಗೆ' ಶಾಲಾ ಊಟವನ್ನು (ಎಸ್.ಸಿ/ಎಸ್.ಟಿ/ಒ.ಬಿ.ಸಿ ವರ್ಗಗಳಿಗೆ ಸೇರಿದ ಯಾರಾದರೂ ವ್ಯಕ್ತಿ ತಯಾರಿಸಿದ ಅಡುಗೆ) ಸ್ವೀಕರಿಸದಂತೆ ಅವರ ಪೋಷಕರು ಸೂಚನೆ ನೀಡಿದ್ದರೂ ಸಹ ಅವರು ಆಹಾರವನ್ನು ಸ್ವೀಕರಿಸುತ್ತಿದ್ದಾರೆ ಎನ್ನುವುದಕ್ಕೆ ಸಾಕ್ಷ್ಯಾಧಾರಗಳಿವೆ. ಊಟವನ್ನು ತಯಾರು ಮಾಡುವಲ್ಲಿ ಹಾಗೂ ಶಾಲಾ ಮಕ್ಕಳ ತಾಯಂದಿರೊಂದಿಗೆ ಶಾಲಾ ಮಟ್ಟದ ಮೇಲ್ವಿಚಾರಣೆಯ ಜವಾಬ್ದಾರಿಯನ್ನು ಹಂಚಿಕೊಳ್ಳುವಲ್ಲಿ ಮಹಿಳಾ ಸ್ವಸಹಾಯ ಸಂಘಗಳನ್ನು (ಎಸ್.ಎಚ್.ಜಿ) ಒಳಗೊಂಡು ಸಾಮಾನ್ಯ ಜೀವನಾನುಕೂಲಗಳಿಲ್ಲದ (ಕೆಲವೊಮ್ಮೆ ನಿರ್ಗತಿಕ) ಮಹಿಳೆಯರಿಗೆ ಉದ್ಯೋಗವಕಾಶಗಳನ್ನು ಸೃಷ್ಟಿಸುವ ಮೂಲಕ ಮಹಿಳೆಯರ ಸಬಲೀಕರಣವನ್ನು ಎಂಡಿಎಂ ಉತ್ತೇಜಿಸಿದೆ. ಊಟ ಸೇವಿಸುವುದಕ್ಕೂ ಮೊದಲು ಹಾಗೂ ನಂತರ ಕೈಗಳನ್ನು ತೊಳೆಯುವುದು ಮುಂತಾದ ಉತ್ತಮ ಶುಚಿತ್ವದ ಅಭ್ಯಾಸಗಳನ್ನು

4. ರಾಷ್ಟ್ರೀಯ ಆಹಾರ ಭದ್ರತಾ ಕಾಯಿದೆ, 2013ರ ಸೆಕ್ಷನ್39ರ ಅಡಿಯಲ್ಲಿ
5. ಆಧಾರ್(ಹಣಕಾಸು ಮತ್ತು ಇತರ ಸಬ್ಸಿಡಿಗಳು, ಸವಲತ್ತುಗಳು ಮತ್ತು ಸೇವೆಗಳ ಉದ್ದೇಶಿತ ವಿತರಣೆ) ಕಾಯಿದೆ, 2016ರ ಸೆಕ್ಷನ್7ರ ಅಡಿಯಲ್ಲಿ
6. ಮೂಲ: ಎಂಡಿಎಂ ವೆಬ್‌ಸೈಟ್ – mdm.nic.in
7. ಸಕ್ಸೇನ, ಎನ್.ಸಿ. (2011), 'ಹಂಗರ್, ಅಂಡರ್ ನ್ಯೂಟ್ರಿಶನ್ ಅಂಡ್ ಫುಡ್ ಸೆಕ್ಯೂರಿಟಿ ಇನ್ ಇಂಡಿಯಾ', ಸಿ.ಪಿ.ಆರ್.ಸಿ–ಐ.ಐ.ಪಿ.ಎ ವರ್ಕಿಂಗ್ ಪೇಪರ್ 44, ಮತ್ತು ಖೇರಾ, ರಿತಿಕಾ (2013), 'ಮಿಡ್‌ಡೇ ಮೀಲ್ಸ್: ಲುಕಿಂಗ್ ಅಹೆಡ್', ಎಕಾನಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ, ಸಂ. XLVIII ಸಂಖ್ಯೆ. 32

ಇದು ಉತ್ತೇಜಿಸಿದೆ. ಅಲ್ಲದೆ, ಪೌಷ್ಟಿಕಾಂಶದ ಕುರಿತು ಶಿಕ್ಷಣವನ್ನು ನೀಡಲು ಇದು ಅವಕಾಶವನ್ನು ನೀಡಿದೆ. ಆದರೆ ಇದನ್ನು ಸರಿಯಾಗಿ ಬಳಸಿಕೊಳ್ಳಲಾಗಿಲ್ಲ. ಶಾಲೆಯೊಳಗೆ ಮೂಲಭೂತ ಆರೋಗ್ಯ ಮಾನದಂಡಗಳಿಗಾಗಿ ಮಕ್ಕಳ ತಪಾಸಣೆ ನಡೆಸುವ ಉದ್ದೇಶ ಹೊಂದಿರುವ ಶಾಲಾ ಆರೋಗ್ಯ ಕಾರ್ಯಕ್ರಮವನ್ನು (ಎಸ್.ಎಚ್.ಪಿ) ಸಹ ಒಟ್ಟಾರೆ ಗುರಿಗೆ ಸಂಬಂಧಿಸಿದಂತೆ ಎಂಡಿಎಂಗೆ ಸಂಪರ್ಕಿಸಲಾಗಿದೆ. ಇದು ಕೆಲವು ರಾಜ್ಯಗಳಲ್ಲಿ ಚೆನ್ನಾಗಿ ಕೆಲಸ ಮಾಡುತ್ತಿದೆ. ಆದರೆ ಪರಿಕಲ್ಪನೆಯ ಈ ಕೊಂಡಿಯನ್ನು ಸಾಮಾನ್ಯವಾಗಿ ಯೋಜನೆ ರೂಪಿಸುವ ಮತ್ತು ಅನುಷ್ಠಾನಕ್ಕೆ ತರುವ ಹಂತಗಳಲ್ಲಿ ಸಶಕ್ತಗೊಳಿಸಬೇಕು. ಕಾಲಕಾಲಕ್ಕೆ ಅಡುಗೆಯವರು ಮತ್ತು ಸಹಾಯಕರ ಆರೋಗ್ಯ ತಪಾಸಣೆಗೆ ಹೆಚ್ಚಿನ ಗಮನ ನೀಡಬೇಕು.[8]

ಕೆಲವು ರಾಜ್ಯಗಳು ಎಂಡಿಎಂನ ಆಕರ್ಷಣೆ ಮತ್ತು ಅನುಷ್ಠಾನವನ್ನು ಸುಧಾರಿಸಲು ನಾವೀನ್ಯತೆಯನ್ನು ತಂದಿವೆ. ಉದಾಹರಣೆಗೆ, ತ್ರಿಪುರವು ಕಲ್ಲಿನ ಮೇಜುಗಳು ಮತ್ತು ಬೆಂಚುಗಳಿಂದ ಚೆನ್ನಾಗಿ ವಿನ್ಯಾಸಗೊಳಿಸಿದ, ಆದರೂ ಕಡಿಮೆ ವೆಚ್ಚದ ಊಟದ ಕೋಣೆಗಳನ್ನು ನಿರ್ಮಿಸಿದೆ. ಗುಜರಾತ್‌ರಾಜ್ಯವು 'ತಿಥಿ ಭೋಜನ್' ಎನ್ನುವ ಉಪಕ್ರಮದ ಮೂಲಕ ಸಮುದಾಯವನ್ನು ಒಳಗೊಳ್ಳುತ್ತಿದೆ. ಶಾಲೆಯ ಎಂದಿನ ಊಟಕ್ಕೆ ಪೂರಕವಾಗಿ ಏನನ್ನಾದರೂ ಒದಗಿಸುವ ಮೂಲಕ ಅಥವಾ ದಾನಿಗೆ ಪ್ರಮುಖವೆನಿಸುವ ದಿನ/ದಿನಾಂಕದಂದು ಪೂರ್ಣ ಪ್ರಮಾಣದ ಊಟವನ್ನು ಒದಗಿಸುವ ಮೂಲಕ ಎಂಡಿಎಂನ ಪೌಷ್ಟಿಕಾಂಶದ ಮೌಲ್ಯವನ್ನು ವೃದ್ಧಿಸಲು ಸ್ಥಳೀಯ ಗ್ರಾಮದ ಸಮುದಾಯಗಳ ಸದಸ್ಯರನ್ನು ಇದು ಉತ್ತೇಜಿಸುತ್ತದೆ. ಕೆಲವು ಇತರ ರಾಜ್ಯಗಳು ಸಹ ಈ ಮಾದರಿಯನ್ನು ಅನುಸರಿಸಿವೆ. ಮಹಾರಾಷ್ಟ್ರವು, ವೆಚ್ಚ ಮತ್ತು ನಿರ್ಮಾಣದ ಸಮಯವನ್ನು ಉಳಿಸುವುದಕ್ಕಾಗಿ ಅನೇಕ ಜಿಲ್ಲೆಗಳಲ್ಲಿ ಅಗ್ನಿ ನಿರೋಧಕ ಹಾಗೂ ಮೊದಲೇ ಸಿದ್ಧಪಡಿಸಿದ (ಪ್ರೀಫ್ಯಾಬ್ರಿಕೇಟೆಡ್) ಮಾಡ್ಯುಲರ್‌ಅಡುಗೆ ಕೋಣೆಗಳನ್ನು ನಿರ್ಮಿಸಿದೆ. ಸಿಕ್ಕಿಂ ರಾಜ್ಯವು ಎಂಡಿಎಂ ತಯಾರಿಯ ವೇಳೆ ತಾಜಾ ಮತ್ತು ಸಾವಯವ ತರಕಾರಿಗಳನ್ನು ಬಳಸುತ್ತದೆ. ಮುಂಗಡವಾಗಿಯೇ ಅನುದಾನದ ವರ್ಗಾವಣೆ ವಿಧಾನವನ್ನು ಅಳವಡಿಸಿಕೊಂಡಿರುವ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಿಗೆ ಈ ಹಿಂದಿನ ವರ್ಷಗಳಲ್ಲಿ ಅನುದಾನದ ಹರಿವು ಒಂದು ಪ್ರಮುಖ ಅಡಚಣೆ ಎನಿಸಿತ್ತು. ಆದರೆ ಈಗ ಈ ಪ್ರಕ್ರಿಯೆಯು ಸುಗಮವಾಗಿ ನಡೆಯುತ್ತದೆ. ಕೆಲವು ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ಅಗತ್ಯಕ್ಕಿಂತಲೂ ಹೆಚ್ಚಿನ ಅನುದಾನವನ್ನು ಒದಗಿಸುತ್ತಿರುವುದು ಸಂತಸದ ವಿಚಾರ.[9]

### ಸವಾಲುಗಳು ಹಾಗೂ ಮುಂದಿರುವ ದಾರಿ

ಸಾಮಾನ್ಯತಃ, ಎಂಡಿಎಂ ಯಶಸ್ಸನ್ನು ಗಳಿಸಿದ್ದರೂ, ಕೆಲವೊಂದು ವಿಭಾಗಗಳಲ್ಲಿ ಸುಧಾರಣೆಯ ಅಗತ್ಯವಿದೆ.

ಶಾಲೆಗಳಲ್ಲಿ ಊಟವನ್ನು ಸೇವಿಸಿ ಅನಾರೋಗ್ಯಕ್ಕೆ ತುತ್ತಾಗುವುದು ಮತ್ತು ಸಾಯುವುದರ ಕುರಿತು ಮಾಧ್ಯಮಗಳಲ್ಲಿ ಆಗಾಗ್ಗೆ ವರದಿಗಳು ಕಾಣಿಸಿಕೊಳ್ಳುತ್ತವೆ. ಆದರೆ ಕಾಲ ಕಳೆದಂತೆ ಇಂತಹ ಘಟನೆಗಳಲ್ಲಿ ಇಳಿಕೆ ಉಂಟಾಗಿದ್ದರೂ, ಸಂಪೂರ್ಣವಾಗಿ ತಡೆಗಟ್ಟಬಹುದಾದ ಕಾರಣಗಳಿಂದಾಗಿ ಇನ್ನೂ ಇವು ಘಟಿಸುತ್ತಿವೆ. ಎಂಡಿಎಂ ಅನುಷ್ಠಾನಕ್ಕೆ ಸಂಬಂಧಿಸಿದ ಕುಂದುಕೊರತೆಗಳು ಸಾಮಾನ್ಯವಾಗಿ ಅಸುರಕ್ಷಿತ ಆಹಾರ, ಆಹಾರದ ಕಳಪೆ ಗುಣಮಟ್ಟ, ಅನಿಯತತೆ, ಅನುದಾನದ ದುರ್ಬಳಕೆ ಮತ್ತು ಜಾತಿಗೆ ಸಂಬಂಧಿಸಿದ ಸಮಸ್ಯೆಗಳಿಗೆ ಸಂಬಂಧಿಸಿವೆ. ಎಂಡಿಎಂನ ಪ್ರತಿ ಅಂಶವನ್ನು ಒಳಗೊಂಡಿರುವ ವಿವರವಾದ ಮಾರ್ಗಸೂಚಿಗಳನ್ನು ಎಂ.ಎಚ್.ಆರ್.ಡಿ. ಜಾರಿಗೊಳಿಸಿದೆ ಹಾಗೂ ಸಾರ್ವಜನಿಕವಾಗಿ ಅವು ಲಭ್ಯ.[10] ಆದರೆ, ಎಲ್ಲಾ ಮಟ್ಟಗಳಲ್ಲಿ ಅನುಷ್ಠಾನ ಅಂಗಗಳ ಸಾಮರ್ಥ್ಯವನ್ನು ರೂಪಿಸದಿದ್ದರೆ ಹಾಗೂ ಶಾಲಾ ಮಟ್ಟದಲ್ಲಿ ಸೂಕ್ತ ಮೇಲ್ವಿಚಾರಣೆ ಮತ್ತು ಉಸ್ತುವಾರಿಯನ್ನು ಖಾತರಿಪಡಿಸದಿದ್ದರೆ ಎಂಡಿಎಂ ಸಮಸ್ಯೆಗಳು ಮರುಕಳಿಸುವುದು ಮುಂದುವರಿಯಲಿದೆ. ತಪ್ಪು ಸಂಭವಿಸಿದಾಗ ಮಾತ್ರವೇ ವರದಿ ಮಾಡುವುದನ್ನು ಬಿಟ್ಟು ಎಂಡಿಎಂನ ಧನಾತ್ಮಕ ಫಲಿತಾಂಶಗಳ ಕುರಿತು ಸಹ ಅರಿವು ರೂಪಿಸಲು ಮಾಧ್ಯಮಗಳು ತಮ್ಮ ಸಾಮರ್ಥ್ಯವನ್ನು ಬಳಸಿಕೊಳ್ಳಬೇಕು.

ಊಟದಲ್ಲಿರುವ ಪೌಷ್ಟಿಕಾಂಶದ ಗುಣಮಟ್ಟವು ಪ್ರಮುಖ ಕಾಳಜಿಯ ವಿಷಯವಾಗಿ ಉಳಿದಿದೆ. ಉತ್ತರ ಪ್ರದೇಶದ ಫೈರೂಜಾಬಾದ್ ಜಿಲ್ಲೆಯಲ್ಲಿ ಸ್ವಾಮಿ ಶಿವಾನಂದ ಮೆಮೋರಿಯಲ್ ಇನ್ಸ್ಟಿಟ್ಯೂಟ್ (ಎಸ್.ಎಸ್.ಎಂ.ಐ) ಅನುಷ್ಠಾನಕ್ಕೆ ತಂದ ಒಂದು ಯೋಜನೆಯಲ್ಲಿ, ಎಸ್.ಎಸ್.ಎಂ.ಐ ಯ ಮಧ್ಯಪ್ರವೇಶಕ್ಕೆ ಮೊದಲು ಎಂಡಿಎಂ ಈ ಕೆಳಗಿನ ಪೌಷ್ಟಿಕಾಂಶಗಳನ್ನು ಒದಗಿಸುತ್ತಿದ್ದುದು ಕಂಡು ಬಂತು.[11]

| ಹಂತ | ಶಕ್ತಿ (Kcal) | | ಪ್ರೋಟೀನ್ (ಗ್ರಾಂಗಳಲ್ಲಿ) | |
|---|---|---|---|---|
| | ಮಾನದಂಡ | ಫೈರೂಜಾಬಾದ್ | ಮಾನದಂಡ | ಫೈರೂಜಾಬಾದ್ |
| ಪ್ರಾಥಮಿಕ | 450 | 353 | 12 | 6.6 |
| ಹಿರಿಯ ಪ್ರಾಥಮಿಕ | 700 | 507 | 20 | 9.6 |

8. ಈ ಕಂಡಿಕೆಯನ್ನು ಇದರಿಂದ ಪಡೆಯಲಾಗಿದೆ: (i) Section on Mid Day Meal in MHRD's Working Group Report for preparing the 12th Plan. (12ನೇ ಯೋಜನೆಗಾಗಿ ಸಿದ್ಧಪಡಿಸಿದ ಎಂ.ಎಚ್.ಆರ್.ಡಿ.ಯ ಕಾರ್ಯಕಾರಿ ಪಂಗಡ ವರದಿಯ ಮಧ್ಯಾಹ್ನದ ಊಟದ ವಿಭಾಗ). (ii) ಎಂಡಿಎಂ ವೆಬ್‌ಸೈಟ್ – mdm.nic.in (iii) ಖೇರಾ, ರೀತಿಕಾ (2013), 'ಮಿಡ್-ಡೇ ಮೀಲ್ಸ್: ಲುಕಿಂಗ್ ಅಹೆಡ್', ಎಕಾನಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ, ಸಂ. XLVIII ಸಂಖ್ಯೆ. 32

9 ಈ ಕಂಡಿಕೆಯು, ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆಯ 'ಮಿಡ್‌ಡೇ ಮೀಲ್ ಸ್ಕೀಮ್-ಬೆಸ್ಟ್ ಪ್ರ್ಯಾಕ್ಟೀಸಸ್ ಫಾಲೋಡ್ ಬೈ ಸ್ಟೇಟ್ಸ್/ಯೂನಿಯನ್ ಟೆರಿಟರೀಸ್(2015-2016)' ಅನ್ನು ಆಧರಿಸಿದೆ.

10 ಎಂಡಿಎಂ ವೆಬ್‌ಸೈಟ್: mdm.nic.in6 Source: MDM Website: mdm.nic.in

11 ಸ್ವಾಮಿ ಶಿವಾನಂದ ಮೆಮೋರಿಯಲ್ ಇನ್ಸ್ಟಿಟ್ಯೂಟ್ (2014): 'ಮಿಡ್‌ಡೇ ಮೀಲ್ ಸ್ಕೀಂ: ಕಾಂಪ್ರಿಹೆನ್ಸಿವ್ ರಿವ್ಯೂ ಅಂಡ್ ಇಂಟರ್ವೆನ್ಷನ್ಸ್', ರಿಪೋರ್ಟ್ ಆನ್ ದ ಎಸ್.ಎಸ್.ಎಂ.ಐ-ಎಂ.ಹೆಚ್.ಆರ್.ಡಿ ಫಜಿಯಾಬಾದ್ ಪೈಲಟ್ ಪ್ರಾಜೆಕ್ಟ್

ಊಟದ ಉತ್ತಮ ಗುಣಮಟ್ಟಕ್ಕಾಗಿ ಎಸ್.ಎಸ್.ಎಂ.ಐ, ಊಟದ ತಯಾರಿಯ ಪ್ರಮಾಣಿತ ವಿಧಾನಗಳನ್ನು ನಿರ್ಧರಿಸುವುದು, ಪ್ರತಿಯೊಬ್ಬನಿಗೆ ನೀಡುವ ಊಟದ ಪ್ರಮಾಣವನ್ನು ನಿರ್ಧರಿಸುವುದು ಮತ್ತು ಅಡುಗೆಯವರ ತರಬೇತಿ ಮತ್ತು ಮೇಲ್ವಿಚಾರಣೆ ಮುಂತಾದ ಕೆಲವು ಸರಳ ಕ್ರಮಗಳನ್ನು ತೆಗೆದುಕೊಂಡಿತು. ಇದರಿಂದಾಗಿ ಪೌಷ್ಟಿಕಾಂಶಗಳ ವಿಚಾರದಲ್ಲಿ (ಸರಾಸರಿ 455 Kcal ಮತ್ತು 11.7 ಗ್ರಾಂನಷ್ಟು ಪ್ರೋಟೀನ್) ಊಟದಲ್ಲಿ ಗಣನೀಯ ಪ್ರಮಾಣದ ಸುಧಾರಣೆ ಉಂಟಾಯಿತು. ಇಂತಹ ಕ್ರಮಗಳು ಹಾಗೂ ಎಂಡಿಎಂ ಮಾರ್ಗದರ್ಶಿಗಳಲ್ಲಿ ಪಟ್ಟಿ ಮಾಡಲಾದ ಇತರ ಕ್ರಮಗಳು ಎಂಡಿಎಂನ ಪೌಷ್ಟಿಕಾಂಶಗಳ ಮೌಲ್ಯವನ್ನು ಹೆಚ್ಚಿಸುವಲ್ಲಿ ಮಾತ್ರವಲ್ಲದೆ ಇದರ ವೈವಿಧ್ಯತೆ, ರುಚಿ ಮತ್ತು ಮಕ್ಕಳ ಪಾಲಿನ ಆಕರ್ಷಣೆಯನ್ನು ಹೆಚ್ಚಿಸುವಲ್ಲಿಯೂ ಸಾಕಷ್ಟು ಕೆಲಸ ಮಾಡುತ್ತವೆ.

ಎಂಡಿಎಂ ಅಡಿಯಲ್ಲಿ ಒಳಗೊಳ್ಳಲಾದ ಶಾಲೆಗಳು (3 ಲಕ್ಷಕ್ಕೂ ಹೆಚ್ಚು) ಮತ್ತು ಒದಗಿಸಲಾದ ಅಡುಗೆ ಕೋಣೆಗಳು ಮತ್ತು ಉಗ್ರಾಣಗಳ ನಡುವೆ ಗಣನೀಯ ಪ್ರಮಾಣದ ಅಂತರವಿದೆ.[12]

ಈ ಅನೇಕ ಶಾಲೆಗಳಿಗೆ ಕೇಂದ್ರೀಕೃತ ಅಡುಗೆ ಕೋಣೆಗಳ ಮೂಲಕ ಆಹಾರವನ್ನು ಒದಗಿಸಲಾಗುತ್ತಿದೆ. ಆದರೆ ಚಿಂತೆಯ ವಿಷಯವೇನೆಂದರೆ 2016ರ ತನಕದ ಒಟ್ಟು 10 ಲಕ್ಷ ಅಡುಗೆ ಕೋಣೆಗಳು ಮತ್ತು ಉಗ್ರಾಣಗಳ ಸಂಚಿತ ಮಂಜೂರಾತಿಯ ಪೈಕಿ 11% ಅಡುಗೆ ಕೋಣೆಗಳು ಮತ್ತು ಉಗ್ರಾಣಗಳ ನಿರ್ಮಾಣವು ಪ್ರಾರಂಭಗೊಂಡಿಲ್ಲ.[13] ಎಂಡಿಎಂ ಗೆ ಬೇಕಾಗುವ ಸೂಕ್ತ ಮೂಲಭೂತ ಸೌಕರ್ಯದ ಪ್ರಾಮುಖ್ಯತೆಯನ್ನು ತಳ್ಳಿ ಹಾಕುವಂತಿಲ್ಲ.

ಏಕೆಂದರೆ ಇದು ಸ್ವಚ್ಛ ಮತ್ತು ಆರೋಗ್ಯಕರ ಉಗ್ರಾಣ ಮತ್ತು ಅಡುಗೆಯ ಮೇಲೆ ನೇರವಾಗಿ ಪರಿಣಾಮ ಬೀರುತ್ತದೆ. ಇದು ಮಕ್ಕಳನ್ನು ಬೆಂಕಿ, ಹೊಗೆ, ಅಡುಗೆಯ ಬಿಸಿ ಪಾತ್ರೆಗಳು ಮತ್ತು ಬಿಸಿ ಆಹಾರವು ಚೆಲ್ಲುವ ಅಪಾಯದಿಂದ ರಕ್ಷಿಸುತ್ತದೆ.

ಇಂಧನ ವೆಚ್ಚ ಮತ್ತು ದಕ್ಷತೆಯ ವಿಚಾರಗಳಿಗೆ ಇನ್ನಷ್ಟೇ ಗಮನ ನೀಡಬೇಕಿದೆ. ಸದ್ಯಕ್ಕೆ, ಎಂಡಿಎಂ ಅಡಿಯಲ್ಲಿ ಹೆಚ್ಚಿನ ಅಡುಗೆಯನ್ನು ಕಟ್ಟಿಗೆಯಿಂದ ಮಾಡಲಾಗುತ್ತದೆ. ಇದರಿಂದಾಗಿ ಆಂತರಿಕ ಮಾಲಿನ್ಯವು ಉಂಟಾಗುತ್ತದೆ ಹಾಗೂ ಇದು ಪರಿಸರ-ಸ್ನೇಹಿಯಲ್ಲ. ಇಂತಹ ಬೃಹತ್ಸರ್ಕಾರಿ ಕಾರ್ಯಕ್ರಮವೊಂದರಲ್ಲಿ ಇದರ ಬಳಕೆಯು ಸೂಕ್ತವಲ್ಲ. ತಾತ್ವಿಕವಾಗಿ ಸರ್ಕಾರವು ಎಲ್.ಪಿ.ಜಿ ಯ ಬಳಕೆಯನ್ನು (ಇಂದು ಲಭ್ಯವಿರುವ ಅತ್ಯಂತ ಕಡಿಮೆ ವೆಚ್ಚದ ಹಾಗೂ ಬಳಕೆದಾರ ಸ್ನೇಹಿ ಆಯ್ಕೆ) ಉತ್ತೇಜಿಸಿದೆ. ಆದರೆ ಕಟ್ಟಿಗೆಯಿಂದ ಎಲ್.ಪಿ.ಜಿ.ಗೆ ಪರಿವರ್ತನಗೊಳ್ಳಲು ನಿರ್ದಿಷ್ಟ ಸಂಪನ್ಮೂಲಗಳನ್ನು ಒದಗಿಸಲಾಗಿಲ್ಲ. ಆದರೂ ಕೆಲವು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ತಮ್ಮ ಎಲ್ಲಾ ಅಥವಾ ಹೆಚ್ಚಿನ ಶಾಲೆಗಳಲ್ಲಿ ಬದಲಾವಣೆಯನ್ನು ತಂದಿವೆ. ಉಳಿದ ರಾಜ್ಯಗಳೂ ಹಂತ ಹಂತವಾಗಿ ಈ ದಿಸೆಯಲ್ಲಿ ಮುಂದುವರಿಯಬೇಕಾದ ಅಗತ್ಯವಿದೆ. ಈ ಉದ್ದೇಶಕ್ಕಾಗಿ ಎಂಡಿಎಂ ಬಜೆಟ್ನಲ್ಲಿ ಮೀಸಲಿಡಲಾದ ಮುನ್ನೇರ್ಪಾಡನ್ನು ಪರಿಗಣಿಸಬೇಕಾದ ಅವಶ್ಯಕತೆ ಇದೆ.

ಎಂಡಿಎಂನಲ್ಲಿ ಶಿಕ್ಷಕರ ಪಾಲ್ಗೊಳ್ಳುವಿಕೆಯು ನಿರಂತರ ಸವಾಲೆನಿಸಿದೆ. ಎಂಡಿಎಂ ಮಾರ್ಗಸೂಚಿಗಳ ಪ್ರಕಾರ, 'ಆಹಾರವನ್ನು ವಿತರಿಸುವ ಮೊದಲು ಶಿಕ್ಷಕರೊಬ್ಬರು ಆಹಾರದ ರುಚಿ ನೋಡುವುದು ಕಡ್ಡಾಯ. ರುಚಿಯ ದಾಖಲೆಯನ್ನು ರಿಜಿಸ್ಟರ್ನಲ್ಲಿ ಶಿಕ್ಷಕರು ದಾಖಲಿಸುವುದು ಕಡ್ಡಾಯ. ಮಕ್ಕಳಿಗೆ ಆಹಾರವನ್ನು ನೀಡುವ ಮೊದಲು ಶಿಕ್ಷಕರೊಂದಿಗೆ ಎಸ್.ಎಂ.ಸಿ ಸದಸ್ಯರು ಸಹ ಸರದಿಯಂತೆ ಆಹಾರದ ರುಚಿ ನೋಡಬೇಕು.' ಎಂಡಿಎಂ ಅಡಿಯಲ್ಲಿ ಶಿಕ್ಷಕರಿಗೆ ಈ ಜವಾಬ್ದಾರಿಯನ್ನು ಮಾತ್ರವೇ ನೀಡಲಾಗಿದೆ. ಆದರೆ, ಎಂಡಿಎಂ ಗೆ ಸಂಬಂಧಿಸಿದ ಅನೇಕ ಕರ್ತವ್ಯಗಳೊಂದಿಗೆ ಶಿಕ್ಷಕರ ಮೇಲೆ ಸಾಕಷ್ಟು ಭಾರವನ್ನು ಹೊರಿಸಲಾಗಿದ್ದು, ಇದು ಬೋಧನೆ ಮತ್ತು ಕಲಿಕೆಯೊಂದಿಗೆ ಹಸ್ತಕ್ಷೇಪ ಮಾಡುತ್ತದೆ ಎಂದು ನಂಬಲಾಗಿದೆ. ಆದರೆ ಈ ಗ್ರಹಿಕೆಯು ಆಧಾರರಹಿತವಲ್ಲದಿರಬಹುದು. ಹೆಚ್ಚಿನ ಪ್ರಾಥಮಿಕ ಶಾಲೆಗಳಲ್ಲಿ ಇಬ್ಬರು ಶಿಕ್ಷಕರನ್ನು ಹೊರತುಪಡಿಸಿ ಬೇರೆ ಯಾವುದೇ ಸಿಬ್ಬಂದಿ ಇರುವುದಿಲ್ಲ. ಅಂತಹ ಶಾಲೆಗಳಲ್ಲಿ ಎಂಡಿಎಂ ಅವರನ್ನು ಸೀಮಿತ ಮಟ್ಟಿಗೆ ಬಳಸಿಕೊಳ್ಳುತ್ತದೆ ಎಂದು ನಿರೀಕ್ಷಿಸುವುದು ಅವಾಸ್ತವ.[14] ಅಡುಗೆಯ ರುಚಿ ನೋಡುವುದು ಹಾಗೂ ಬಡಿಸುವುದೇ ಮೊದಲಾದ ಕರ್ತವ್ಯಗಳು ಮಕ್ಕಳು ಕಲಿಕೆಗೆ ನೆರವಾಗಲು ತಮಗೆ ಎಂಡಿಎಂ ಒದಗಿಸಿದ ನ್ನೊಂದು ಅವಕಾಶ ಎಂದು ಶಿಕ್ಷಕರು ತಿಳಿಯಬಹುದಾಗಿದೆ. ಊಟದ ಸಮಯದಲ್ಲಿ ಒಗ್ಗಟ್ಟು ಮತ್ತು ಸಮಾನತೆಯ ಭಾವನೆಯನ್ನು ಬೆಳೆಸುವುದಕ್ಕಾಗಿ ಅವರು ಪರಿಣಾಮಕಾರಿಯಾಗಿ ಸಾಮಾಜಿಕ ಬಂಧವನ್ನು ಪೋಷಿಸಬಹುದು.

ಕೇಂದ್ರೀಕೃತ ಅಡುಗೆ ಕೋಣೆಗಳಿಂದ ಹೆಚ್ಚಿನ ಶಾಲೆಗಳಿಗೆ ಆಹಾರವನ್ನು ಒದಗಿಸುವ ಮೂಲಕ ಶಿಕ್ಷಕರ ಮೇಲಿನ ಹೊರೆಯನ್ನು ಕಡಿಮೆ ಮಾಡಬಹುದು ಎಂದು ಕೆಲವು ರಾಜ್ಯಗಳು ಸಲಹೆ ನೀಡಿವೆ. ಒಂದೇ ಕಡೆ ಅಡುಗೆ ಮಾಡಿ ಆಹಾರವನ್ನು ಶಾಲೆಗಳಿಗೆ ಸರಬರಾಜು ಮಾಡುವುದರಿಂದ ನಗರ ಮತ್ತು ಅರೆ ನಗರ ಪ್ರದೇಶಗಳಲ್ಲಿ ಅನುಕೂಲತೆಗಳಿವೆ. ಆದರೆ ಈ ವ್ಯವಸ್ಥೆಯನ್ನು ಗ್ರಾಮೀಣ ಪ್ರದೇಶಗಳಿಗೆ ವಿಸ್ತರಿಸುವ ಮೊದಲು ಎಚ್ಚರಿಕೆ ವಹಿಸಬೇಕು. ಎಂಡಿಎಂ ನಿಯಮಗಳು ಗಣನೆಗೆ ತೆಗೆದುಕೊಂಡಿರುವಂತೆ ಸಂಪರ್ಕ ರಸ್ತೆಗಳ ಗುಣಮಟ್ಟವು ಪ್ರಮುಖ ಸಮಸ್ಯೆಯಾಗಿದೆ.[15] ಅಷ್ಟೊಂದು ಪ್ರಮುಖವಲ್ಲದ ಇನ್ನೊಂದು ಸಮಸ್ಯೆಯೆಂದರೆ, ಸ್ಥಳೀಯ ಸಮುದಾಯಗಳ, ಅದರಲ್ಲೂ ಮುಖ್ಯವಾಗಿ ಶಾಲೆಯಲ್ಲಿ ಕಲಿಯುತ್ತಿರುವ ಮಕ್ಕಳ ಪೋಷಕರ ಒಳಗೊಳ್ಳುವಿಕೆ ಮತ್ತು ಪಾಲ್ಗೊಳ್ಳುವಿಕೆಯನ್ನು ಉತ್ತೇಜಿಸಲು ಎಂಡಿಎಂ ಬಯಸುತ್ತದೆ. ಎಸ್.ಎಂ.ಸಿ.ಗಳು ಶಾಲಾ ಮಟ್ಟದಲ್ಲಿ ಎಂಡಿಎಂನ ಉಸ್ತುವಾರಿ ಮತ್ತು ಮೇಲ್ವಿಚಾರಣೆಯನ್ನು ನಡೆಸಬೇಕು. ಕೇಂದ್ರೀಕೃತ ಅಡುಗೆ ಕೋಣೆಗಳ ವಿಚಾರದಲ್ಲಿ ಇದು ಸಾಧ್ಯವಿಲ್ಲ. ಎಂಡಿಎಂನ ಉಸ್ತುವಾರಿಗೆ ಎಸ್.ಎಂ.ಸಿ.ಗಳು ಮತ್ತು ಸ್ಥಳೀಯ ಸಮುದಾಯಗಳ ಸಾಮರ್ಥ್ಯವನ್ನು ಬೆಳೆಸುವ ಅಗತ್ಯವಿದೆ. ಇದು ಶಾಲಾ ಆಡಳಿತದ ಇತರ ಅಂಶಗಳಲ್ಲಿ ತೊಡಗಿಸಿಕೊಳ್ಳುವುದಕ್ಕಾಗಿ ಎಸ್.ಎಂ.ಸಿ.ಗಳಿಗೆ ಅಮೂಲ್ಯ ಹೆಜ್ಜೆಯೆನಿಸಿದೆ. ತಮ್ಮ ಕ್ರಿಯೆಗಳು ಮತ್ತು ಪರಿಣಾಮಗಳ ಕುರಿತು ಅರಿವು ಹೊಂದಿರುವ ಹಾಗೂ ತರಬೇತಾದ ಎಸ್.ಎಂ.ಸಿ.ಗಳು

12 ಮೂಲ: ಎಂಡಿಎಂ ವೆಬ್‌ಸೈಟ್: mdm.nic.in

13 ಸೆಪ್ಟೆಂಬರ್ 2016ರಲ್ಲಿ, ಸಬಲೀಕರಣದ ಸಮಿತಿಗೆ ಎಂಡಿಎಂ ಯೋಜನೆಯ ಕುರಿತು ಎಂ.ಹೆಚ್.ಆರ್.ಡಿ ಯ ಪ್ರಸ್ತುತಿ

14 ನ್ಯಾಷನಲ್ ಯೂನಿವರ್ಸಿಟಿ ಆಫ್ ಎಜುಕೇಶನಲ್ ಪ್ಲಾನಿಂಗ್ ಅಂಡ್ ಅಡ್ಮಿನಿಸ್ಟ್ರೇಶನ್, ನವದೆಹಲಿ (2015), 'ಮಾಡೆಲ್ ಎಜುಕೇಶನ್ ಕೋಡ್: ಪ್ರ್ಯಾಕ್ಟೀಸಸ್ ಅಂಡ್ ಪ್ರೊಸೆಸಸ್ ಆಫ್ ಸ್ಕೂಲ್ ಮ್ಯಾನೇಜ್‌ಮೆಂಟ್'

15 ಎಂಡಿಎಂ (ತಿದ್ದುಪಡಿ) ನಿಯಮಗಳು, 2017

ಶಾಲಾ ಶಿಕ್ಷಣದ ಗುಣಮಟ್ಟದ ಸುಧಾರಣೆಯಲ್ಲಿ ಪ್ರಮುಖ ಪಾತ್ರ ವಹಿಸಬಲ್ಲವು.

ಎಂಡಿಎಂ ಮಾರ್ಗಸೂಚಿಗಳು, ಅನೇಕ ವರ್ಷಗಳಿಂದ ಶಾಲಾ ಊಟದ ತಯಾರಿಯಲ್ಲಿ ಎಸ್.ಎಚ್.ಜಿ ಗಳು, ಸರ್ಕಾರೇತರ ಸೇವಾ ಸಂಸ್ಥೆಗಳು ಮತ್ತು ಸಾಮಾಜಿಕ ಸೇವಾ ಸಂಸ್ಥೆಗಳ ಸೇವೆಯನ್ನು ಬಳಸಿಕೊಳ್ಳಲು ಅನುವುಮಾಡಿಕೊಟ್ಟಿವೆ. ಪರಿಷ್ಕೃತ ಮಾರ್ಗಸೂಚಿಗಳನ್ನು 2017ರಲ್ಲಿ ಜಾರಿಗೊಳಿಸಲಾಗಿದ್ದು, ಇದರ ಪ್ರಕಾರ ಸರ್ಕಾರದ ಜೊತೆಗೆ ಒಪ್ಪಂದಕ್ಕೆ ಸಹಿ ಹಾಕಬೇಕಾಗುತ್ತದೆ. ಈ ಸಂಸ್ಥೆಗಳ ಆಯ್ಕೆಗೆ ಅನುಸರಿಸುವ ಮಾನದಂಡ ಮತ್ತು ಒಪ್ಪಂದಕ್ಕೆ ಒಳಪಟ್ಟ ಪಕ್ಷಗಳ ಪಾತ್ರಗಳು ಹಾಗೂ ಜವಾಬ್ದಾರಿಗಳನ್ನು ವಿವರವಾಗಿ ತಿಳಿಸಲಾಗಿದೆ. ಈ ಚೌಕಟ್ಟಿನ ಹೊರತಾಗಿಯೂ, ತಳ ಮಟ್ಟದಲ್ಲಿ ಈ ವ್ಯವಸ್ಥೆಗಳು ಯಾವ ರೀತಿ ರೂಪುಗೊಳ್ಳುತ್ತವೆ ಎನ್ನುವ ಕುರಿತು ನಿಗಾ ವಹಿಸಬೇಕಾದ ಅಗತ್ಯವಿದೆ. ಪಟ್ಟಭದ್ರ ಹಿತಾಸಕ್ತಿಯನ್ನು ಹೊಂದಿರುವ ಪ್ರಭಾವಿ ವ್ಯಕ್ತಿಗಳು, ಮಹಿಳಾ ಮಂಡಲಗಳು/ ಎಸ್.ಎಚ್.ಜಿ ಗಳ ಮೇಲೆ ಹಿಡಿತ ಸಾಧಿಸಿದ ಕಾರಣ ಪೌಷ್ಟಿಕಾಂಶ ಒದಗಿಸುವ ಕಾರ್ಯಕ್ರಮಗಳಿಗೆ ಈ ಹಿಂದೆ ಹಿನ್ನಡೆಯಾಗಿತ್ತು. ಹೀಗಾಗಿ ಮಕ್ಕಳಿಗೆ ಅನಾರೋಗ್ಯಕರ, ಕಲುಷಿತಗೊಂಡ ಮತ್ತು ಪೌಷ್ಟಿಕವಲ್ಲದ ಆಹಾರವನ್ನು ಒದಗಿಸಿದ ಅನೇಕ ಘಟನೆಗಳು ನಡೆದಿವೆ. _____ ದರೆ ಬಿಸಿ ಊಟ _______ ನೀಡಬೇಕೆಂಬ ಷರತ್ತಿನಿಂದಾಗಿ ಇಂತಹ 'ಅಪಹರಣ'ಗಳ ಸಾಧ್ಯತೆ ಕಡಿಮೆಯಾಗಿದೆ. ಆದರೂ ಶಾಲಾ ಮಕ್ಕಳನ್ನು ಇಂತಹ ನಿರ್ಲಜ್ಜ ಶಕ್ತಿಗಳಿಂದ ರಕ್ಷಿಸುವುದಕ್ಕಾಗಿ ಎಸ್.ಎಂ.ಸಿ ಗಳು, ಸ್ಥಳೀಯ ಸಂಸ್ಥೆಗಳು ಮತ್ತು ಮಾಧ್ಯಮಗಳು ನಿರಂತರವಾಗಿ ಕಾವಲುಗಾರನ ಪಾತ್ರವನ್ನು ನಿಭಾಯಿಸಬೇಕು.

### ತೀರ್ಮಾನ

ಆಹಾರದ ಹಕ್ಕು ಅಭಿಯಾನ ಮತ್ತು ಸರ್ವೋಚ್ಚ ನ್ಯಾಯಾಲಯದ ಹಸ್ತಕ್ಷೇಪವು ಎಂಡಿಎಂನ ಪ್ರಸ್ತುತ ಮಹತ್ವ ಮತ್ತು ಪ್ರಮಾಣವನ್ನು ಖಾತರಿಪಡಿಸುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸಿದೆ. ವಿವಿಧ ಸಂಸ್ಥೆಗಳ ಅದರಲ್ಲೂ ಮುಖ್ಯವಾಗಿ 'ಆಹಾರದ ಹಕ್ಕು ಪ್ರಕರಣ'ದಲ್ಲಿ ಸರ್ವೋಚ್ಚ ನ್ಯಾಯಾಲಯದ ನಿಯೋಗಗಳ ನಿಗಾ ಮತ್ತು ನಿರಂತರ ಮೇಲ್ವಿಚಾರಣೆಯು ಎಂಡಿಎಂ ಮತ್ತು ಇದರ ಅನುಷ್ಠಾನದಲ್ಲಿ ನಿರಂತರ ಸುಧಾರಣೆಗಳನ್ನು ಉತ್ತೇಜಿಸಿದೆ. ಪ್ರಕರಣವು ಮಾಧ್ಯಮಗಳ ಗಮನವನ್ನು ಸೆಳೆದಿದೆ. ಸಮಾನತೆ ಮತ್ತು ಕಲಿಕೆಯ ಉತ್ತಮ ಗುಣಮಟ್ಟದೊಂದಿಗೆ ಮಕ್ಕಳ ಪೌಷ್ಟಿಕತೆಯನ್ನು ವೃದ್ಧಿಸುವಲ್ಲಿ ಮತ್ತು ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರೀಕರಿಸುವಲ್ಲಿ ತಯಾರಿಸಿದ ಊಟದ ಸಾಮರ್ಥ್ಯವನ್ನು ಪಂಡಿತರು ಎಂಡಿಎಂನ ಪರಿಣಾಮದ ನಿಟ್ಟಿನಲ್ಲಿ ಶೋಧಿಸಿದ್ದು, ಇದನ್ನು ಯಶೋಗಾಥೆಯೆಂದು ಪರಿಗಣಿಸಲಾಗಿದೆ. ಕಳೆದ ಹತ್ತು ವರ್ಷಗಳಲ್ಲಿ, ಭಾರತ ಸರ್ಕಾರದ ಎಂಡಿಎಂ ಬಜೆಟ್ರೂ. 6500 ಕೋಟಿಯಿಂದ ರೂ. 10,000 ಕೋಟಿಗೆ ಹೆಚ್ಚಿದೆ. ಅಲ್ಲದೆ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ತಮ್ಮ ಪಾಲನ್ನು ನೀಡಿವೆ. ಮುಂದೆ ಸಾಗಿದಂತೆ, ಹಿಂದಿರುಗಿ ನೋಡಿ, ನಮ್ಮ ಶಾಲಾ ಮಕ್ಕಳ ಮೇಲೆ ಉತ್ತಮ ಹೂಡಿಕೆಯನ್ನು ಮಾಡಿದ್ದೇವೆ ಎಂದು ಭಾವಿಸಬಹುದು ಎಂಬುದನ್ನು ನಾವು ಖಾತರಿಪಡಿಸಿಕೊಳ್ಳಬೇಕು.. ಶಿಕ್ಷಣದ ಪ್ರಾಥಮಿಕ ಹಂತದಲ್ಲಿ ಪ್ರತಿ ಮಗುವಿಗೂ ಎಂಡಿಎಂ ತಲುಪುವ ಭರವಸೆ ಸಂಪೂರ್ಣವಾಗಿ ಈಡೇರಬೇಕಾದರೆ ನಮ್ಮ ಯಶಸ್ಸುಗಳನ್ನು ಆಧಾರಸ್ತಂಭವಾಗಿ ಬಳಸಿಕೊಳ್ಳಬೇಕು.

● ಅನುವಾದಕರು: **ಮೆಲ್ವಿನ್ ಮೆಂಡೋನ್ಸಾ** | ಪರಿಶೀಲಕರು: **ಶೈಲಜಾ ಜಿ ಪಿ**

**ಅಂಶು** ಅವರು 1975ರ ಬ್ಯಾಚ್‌ನ ಭಾರತೀಯ ಆಡಳಿತ ಸೇವೆಯ ನಿವೃತ್ತ ಅಧಿಕಾರಿಯಾಗಿದ್ದಾರೆ. ಅವರು 2012ರಲ್ಲಿ ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ವಿಭಾಗದ ಕಾರ್ಯದರ್ಶಿಯಾಗಿ ನಿವೃತ್ತಿ ಹೊಂದಿದರು. ಅವರು ಪ್ರಸ್ತುತ ಪ್ರದಾನ್, ಕಥಾ, ರೇನ್‌ಬೋ ಫೌಂಡೇಷನ್ ಆಫ್ ಇಂಡಿಯಾ, ಸೆಂಟರ್ ಫಾರ್ ಈಕ್ವಿಟಿ ಸ್ಟಡೀಸ್, ದಿ ಆಗಾ ಖಾನ್ ಫೌಂಡೇಷನ್ ಇಂಡಿಯಾ ಮುಂತಾದ ಕೆಲವು ಸರ್ಕಾರೇತರ ಸಂಸ್ಥೆಗಳ ಆಡಳಿತ ಮಂಡಳಿಗಳಲ್ಲಿ ಹಾಗೂ ಏಮ್ಸ್ ಭೋಪಾಲ್‌ನ ಸಾಂಸ್ಥಿಕ ಮಂಡಳಿ ಮತ್ತು SAILನ ನಿರ್ದೇಶಕರ ಮಂಡಳಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಅವರನ್ನು anshuvaish52@gmail.com ಮೂಲಕ ಸಂಪರ್ಕಿಸಬಹುದು.